ದೂರವಾಣಿ/Phone : 0824-2287276
E-mail:registrarmangaloreuniversity@gmail.com
registrar@mangaloreuniversity.ac.in

# ಮಂಗಳೂರು ವಿಶ್ವವಿದ್ಯಾನಿಲಯ
# MANGALORE UNIVERSITY

Azadi Ka Amrit Mahotsav

Accredited by NAAC

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ – 574199
ಕರ್ನಾಟಕ ರಾಜ್ಯ, ಭಾರತ

Office of the Registrar
Mangalagangothri - 574 199
Karnataka State, India

ಕ್ರಮಾಂಕ/No. ದಿನಾಂಕ:

ಮಂವಿ/ಕುಸ/ಸಿಂಡಿ/ಎಸ್2/65/2023/55905 27.11.2023

ರಿಗೆ:

ಸಿಂಡಿಕೇಟಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ.

ಮಾನ್ಯರೇ,

ವಿಷಯ: ದಿನಾಂಕ 29.11.2023ರಂದು ನಡೆಯಲಿರುವ ಸಿಂಡಿಕೇಟು ಸಭೆಯ ಪೂರಕ ಕಾರ್ಯಸೂಚಿಗಳನ್ನು ಕಳುಹಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿ ಪತ್ರ ಸಮ ಸಂಖ್ಯೆ ದಿನಾಂಕ 06.11.2023, 16.11.2023 ಮತ್ತು 21.11.2023.

-------

ದಿನಾಂಕ 29.11.2023 ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟು ಸಭಾಂಗಣದಲ್ಲಿ ನಡೆಯಲಿರುವ ಸಿಂಡಿಕೇಟಿನ 2023ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ಪೂರಕ ಕಾರ್ಯಸೂಚಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ.

ತಮ್ಮ ವಿಶ್ವಾಸಿ,

ಕುಲಸಚಿವರು.

ಪ್ರತಿಗಳು:

1. ಘನತೆವೆತ್ತ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ ಬೆಂಗಳೂರು-560001
2. ಸರಕಾರದ ಅಪರ ಮುಖ್ಯ ಕಾರ್ಯದರ್ಶಿ (ಉನ್ನತ ಶಿಕ್ಷಣ) ಶಿಕ್ಷಣ ಇಲಾಖೆ, ಜನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001.

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 29.11.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಲಿರುವ ಸಿಂಡಿಕೇಟಿನ 2023ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ಪೂರಕ ಕಾರ್ಯಸೂಚಿಗಳು**

| ವಿಷಯ ಸಂಖ್ಯೆ | ಕಾರ್ಯಸೂಚಿ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|---|
| | ಡಿಇವಿ : ಸಾ.ಸ.7:15 (2023) | ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಪಿ.ಎ. ಪ್ರಥಮ ದರ್ಜೆ ಕಾಲೇಜು, ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ. | **24** |
| | ಡಿಇವಿ : ಸಾ.ಸ.7:16 (2023) | ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎಟಿಎಂ ಕಟ್ಟಡಕ್ಕೆ ಪರವಾನಿಗೆ ಶುಲ್ಕ (ಅನ್ವಯವಾಗುವ ತೆರಿಗೆಯೊಂದಿಗೆ) ಮತ್ತು ಅವಧಿ ನಿಗದಿಪಡಿಸುವ ಬಗ್ಗೆ. | **25** |

ಕಾರ್ಯಸೂಚಿ:ಡಿಇವಿ : ಸ್ಥಾ.ಸ. 7:15 (೨೦೨೩)

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಪಿ.ಎ. ಪ್ರಥಮ ದರ್ಜೆ ಕಾಲೇಜು, ಮಂಗಳೂರು ಇವರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯ ಅನುಮೋದನೆ ಬಗ್ಗೆ.

******

ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರ ಪತ್ರ ದಿನಾಂಕ: 05.10.2022ರಲ್ಲಿ Academic Programs/Workshops/Seinars/Student Exchage ವಿಷಯಕ್ಕೆ ಸಂಬಂಧಿಸಿ ಆಸಕ್ತಿಯನ್ನು ಹೊಂದಿರುವುದರಿಂದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಪಿ.ಎ. ಪ್ರಥಮ ದರ್ಜೆ ಕಾಲೇಜು, ಮಂಗಳೂರು ನಡುವೆ ಒಡಂಬಡಿಕೆ ಮಾಡಿಕೊಳ್ಳಲು ಕರಡು ಒಡಂಬಡಿಕೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ (ಅನುಬಂಧದಲ್ಲಿ ಲಗತ್ತಿಸಿದೆ).

ಆದುದರಿಂದ ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಮತ್ತು ಪಿ.ಎ. ಪ್ರಥಮ ದರ್ಜೆ ಕಾಲೇಜು, ಮಂಗಳೂರು ನಡುವೆ ಮೇಲಿನ ವಿಷಯಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ, ಪ್ರಕರಣ 29(1) ಮತ್ತು 29(2)(a&b)ಯ ಅವಕಾಶದಂತೆ ಸಿಂಡಿಕೇಟಿನ ಪರಿಗಣನೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

23/11/2023
11.55 a.m.

DRAFT

## MEMORANDUM OF UNDERSTANDING (MoU)

MEMORANDUM OF UNDERSTANDING (MOU) between

**The Principal**

**P. A. First Grade College, Nadupadavu, Mangalore (Party A)**

**and**

**The Principal**

**University College, Hampankatta, Mangalore (Party B)**

### PARTIES TO MoU

This is an MoU between The Principal, P.A. First Grade College, Nadupadavu, Mangalore and The Principal, University College, Hampankatta, Mangalore.

### PERIOD / TERM OF MoU

The Memorandum of Understanding (MoU) is entered into on the 1st day of November, 2023 is valid from 01.11.2023 to 30.10.2026, by and between The Principal, P.A. First Grade College, Nadupadavu, Mangalore and The Principal, University College, Hampankatta, Mangalore.

### AREAS OF COLLABORATION

P.A. First Grade College, Nadupadavu, Mangalore and University College, Hampankatta, Mangalore, agree to collaborate in the following areas:

1. To offer student development programmes on knowledge enhancement in the field of Consumer Movement / Consumer Protection.
2. To conduct Regional, National and International Conferences, Seminars, Workshops to facilitate participation of faculty and students and to encourage publications in peer reviewed journals on Consumer Movement, Consumer Protection and other related areas.
3. Participation opportunities for mutual Student Exchange programmes on the issues of Consumer Protection.
4. To facilitate faculty development through faculty development programmes, guest lectures and resource persons' exchange initiatives on Consumer Protection.
5. To create an awareness on Consumer Protection Laws and Practices among the students and faculty members of P.A. First Grade College by the subject experts of University College Mangalore.

## TERMS OF COLLABORATION AND UNDERSTANDING

P.A. First Grade College, Nadupadavu, Mangalore (Party A), and University College, Hampankatta, Mangalore (Party B) will have an understanding to cooperate on the areas of collaboration mentioned here above.

## RELATIONSHIP OF THE PARTIES

For the purposes of the MOU both the parties are independent constituents. Neither this MOU nor any activities described herein shall be deemed to creating a partnership, joint venture, franchisee, agency, or any other obligation. Neither party is authorized in any manner to make any endorsement or to bind the other party.

## TERMINATION

Either Party may terminate this MOU by giving a 90 days' notice in advance to the other party. On termination each Party shall return to the other party all such confidential and proprietary information, documents and reference materials and copies thereof the other party in its possession.

This MoU can be extended or terminated by mutual consent of the parties in writing.

## ENTIRE MoU

No modification or amendments to this MoU shall be binding upon the parties, unless made in writing and duly executed by authorized official of both the parties.

## FINANCIAL IMPLICATIONS AND TAX BURDENS

No Financial implications and Tax burdens on the part of The Principal, University College, Hampankatta, Mangalore.

IN WITNESS WHEREOF, each of the parties hereto has caused this MoU to be duly executed by a duly authorized representative of such party as of the date mentioned above.

| For P.A. First Grade College, Nadupadavu, Mangalore | For University College, Hampankatta, Mangalore |
|---|---|
| Name & Designation:<br>**Dr. Surfraz J Hasim**<br>Principal | Name & Designation:<br>**Dr. Anasuya Rai**<br>Principal |
| Place: Mangalore<br>Date: xxxxxxxxxx | Place: Mangalore<br>Date: xxxxxxxxxx |

Principal
University College
Mangalore - 575 001, D.K

**ಕಾರ್ಯಸೂಚಿ : ಡಿಇವಿ :** ಸಾ.ಪ್ರ. 7:16 (೨೦೨3)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎಟಿಎಂ ಕಟ್ಟಡಕ್ಕೆ ಪರವಾನಿಗೆ ಶುಲ್ಕ (ಅನ್ವಯವಾಗುವ ತೆರಿಗೆಯೊಂದಿಗೆ) ಮತ್ತು ಅವಧಿ ನಿಗದಿಪಡಿಸುವ ಬಗ್ಗೆ.

*******

ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎ.ಟಿ.ಎಂ. ಕಟ್ಟಡವನ್ನು ಸದ್ರಿ ಬ್ಯಾಂಕ್‌ನ ಸ್ವಂತ ವೆಚ್ಚದಲ್ಲಿ ನಿರ್ಮಿಸಿ ದಿನಾಂಕ 10.06.2016 ರಿಂದ 5 ವರ್ಷಗಳ ಅವಧಿಗೆ ಪರವಾನಿಗೆ ಶುಲ್ಕ ರಹಿತವಾಗಿ ನಿರ್ವಹಿಸಲು ಕುಲಸಚಿವರ ಪತ್ರ ಸಂ: ಮವಿ/ಡಿಇವಿ/67/2016-17/ಡಿ1 ದಿನಾಂಕ: 04.11.2016 ರಲ್ಲಿ ಅನುಮತಿ ನೀಡಲಾಗಿರುತ್ತದೆ. (ಅನುಬಂಧ-1). ಹಾಗೂ ಕುಲಸಚಿವರ ಪತ್ರ ದಿನಾಂಕ: 21.06.2021 ಮತ್ತು 24.09.2021 ರಲ್ಲಿ ಪರವಾನಿಗೆ ಅವಧಿ ಮುಂದುವರಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಲಾಗಿದ್ದರೂ ಬ್ಯಾಂಕ್ ವತಿಯಿಂದ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ.(ಅನುಬಂಧ-2)

ಕುಲಸಚಿವರ ಕಚೇರಿ ಪತ್ರ ದಿನಾಂಕ: 22.06.2023 ರಲ್ಲಿ ಪರವಾನಿಗೆ ಅವಧಿ ಮುಂದುವರಿಸುವ ಬಗ್ಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿರುವ ಪತ್ರಕ್ಕೆ ಸಂಬಂಧಿಸಿದಂತೆ (ಅನುಬಂಧ-3) ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಬೆಳ್ಮ ದೇರಳಕಟ್ಟೆ ಇವರ ಪತ್ರ ದಿನಾಂಕ: 26.06.2023 ರಲ್ಲಿ ಕರಾರನ್ನು ಮುಂದುವರೆಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. (ಅನುಬಂಧ-4)

ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ಇವರೊಂದಿಗೆ ದಿನಾಂಕ 10.06.2016 ರಲ್ಲಿ ಮಾಡಿಕೊಂಡ ಕರಾರು ಒಪ್ಪಂದದ ಅವಧಿಯು ದಿನಾಂಕ 09.06.2021 ಕ್ಕೆ ಮುಕ್ತಾಯವಾಗಿರುತ್ತದೆ. ಕರಾರು ಒಪ್ಪಂದ ಪತ್ರದ ಶರ್ತ ಸಂಖ್ಯೆ 9 ರ ಪ್ರಕಾರ ಸದರಿ ಬ್ಯಾಂಕಿನವರಿಗೆ 5 ವರ್ಷಗಳ ಅವಧಿಗೆ ಪರವಾನಿಗೆ ಶುಲ್ಕ ರಹಿತ ಅವಧಿ ಮುಗಿದ ನಂತರ ಮಂಗಳೂರು ವಿಶ್ವವಿದ್ಯಾನಿಲಯ ಆ ಸಂದರ್ಭದಲ್ಲಿ ವಿಧಿಸುವ ಪರವಾನಿಗೆ ಶುಲ್ಕ ಪಾವತಿಸತಕ್ಕದ್ದು ಎಂಬುದಾಗಿದೆ. (ಅನುಬಂಧ-5)

ಮುಂದುವರೆದು, ಕುಲಸಚಿವರ ಕಚೇರಿ ಪತ್ರ ದಿನಾಂಕ: 14.08.2023 ರಲ್ಲಿ ಕರ್ನಾಟಕ ಬ್ಯಾಂಕ್ ಎ.ಟಿ.ಎಂ. ಕಟ್ಟಡಕ್ಕೆ ಮಾಸಿಕ ಪರವಾನಿಗೆ ಶುಲ್ಕ ನಿಗದಿಪಡಿಸಲು ಕಟ್ಟಡವನ್ನು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿರುವ ಹಿನ್ನಲೆಯಲ್ಲಿ, ಕಾರ್ಯಕಾರಿ ಅಭಿಯಂತರರ ಕಚೇರಿ ಪತ್ರ ದಿನಾಂಕ:07.09.2023 ರಲ್ಲಿ ಸದ್ರಿ ಕಟ್ಟಡಕ್ಕೆ ರೂ.4,050/- ನ್ನು ಪರವಾನಿಗೆ ಶುಲ್ಕ ವಿಧಿಸಬಹುದೆಂಬುದಾಗಿ ತಿಳಿಸಿರುತ್ತಾರೆ. (ಅನುಬಂಧ-6)

ಆದುದರಿಂದ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎ.ಟಿ.ಎಂ. ಕಟ್ಟಡಕ್ಕೆ ಮಾಸಿಕ ಪರವಾನಿಗೆ ಶುಲ್ಕ (ಅನ್ವಯವಾಗುವ ತೆರಿಗೆಯೊಂದಿಗೆ) ಹಾಗೂ ಪರವಾನಿಗೆ ಅವಧಿ ನಿಗದಿಪಡಿಸುವ, ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಪ್ರಕರಣ 29(1) ಮತ್ತು 2(ಎ) & (ಬಿ) ಯ ಅವಕಾಶದಂತೆ ಸಿಂಡಿಕೇಟ್ ಸಭೆಯ ಪರಿಗಣನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಲಾಗಿದೆ.

23/11/2023
11.55 a.m.

ಅನುಬಂಧ - 1

ದೂರವಾಣಿ: 0824-2287276
ಫ್ಯಾಕ್ಸ್ : 0824-2287424

# ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನಿಂದ 'ಎ' ಗ್ರೇಡ್ ಮಾನ್ಯತೆ ಹೊಂದಿದೆ)

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ-574199

ಸಂ.ಮವಿ/ಡಿಇವಿ/67/2016-17/ಡಿ1

ದಿನಾಂಕ: 04.11.2016.

ರಿಗೆ,

ಶಾಖಾ ವ್ಯವಸ್ಥಾಪಕರು,
ಕರ್ನಾಟಕ ಬ್ಯಾಂಕ್
ದೇರಳಕಟ್ಟೆ.

ಮಾನ್ಯರೇ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಕರ್ನಾಟಕ ಬ್ಯಾಂಕ್‌ನ ಶಾಖೆಯನ್ನು ತೆರೆಯಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ಪತ್ರ ಸಂಖ್ಯೆ/GEN/OR/232/20116-17 ದಿನಾಂಕ 19.08.2016.
2. ದಿನಾಂಕ 22.10.2016ರಂದು ನಡೆದ ಸಿಂಡಿಕೇಟು ಸಭೆಯ ಕಾರ್ಯ ಸೂಚಿ ಸಂಖ್ಯೆ:ಮವಿ/ಡಿಇವಿ/ಸಾ.ಸ.7-8(2016)ರಲ್ಲಿನ ನಿರ್ಣಯ.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ ಉಲ್ಲೇಖ(1)ರ ತಮ್ಮ ಪತ್ರದ ಕೋರಿಕೆಯಂತೆ ಹಾಗೂ ದಿನಾಂಕ 22.10.2016ರಂದು ನಡೆದ ಸಿಂಡಿಕೇಟು ಸಭೆಯ ನಿರ್ಣಯದಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್‌ನ ATM ಕಟ್ಟದ ಹಾಗೂ ಬಸ್ಸು ತಂಗುದಾಣದ ಮಧ್ಯ ಬರುವ ಸ್ಥಳಾವಕಾಶದಲ್ಲಿ ಕರ್ನಾಟಕ ಬ್ಯಾಂಕ್‌ನ ಶಾಖೆ (Extension counter) ತೆರೆಯಲು ಈ ಕೆಳಗೆ ನಮೂದಿಸಿದ ಷರತ್ತುಗಳಿಗೊಳಪಟ್ಟು ಅನುಮತಿ ನೀಡಲಾಗಿದೆ.

ಷರತ್ತುಗಳು:

1) ವಿಶ್ವವಿದ್ಯಾನಿಲಯದಿಂದ ಪಡೆದಿರುವ ಅನುಮತಿ ಈ ಕರಾರಿಗೆ ಸಹಿ ಮಾಡಿದ ದಿನಾಂಕದಿಂದ ಅನ್ವಯಿಸಿ ಐದು ವರ್ಷಕ್ಕೆ ಸೀಮಿತವಾಗಿರತಕ್ಕದ್ದು.
2) ಕರ್ನಾಟಕ ಬ್ಯಾಂಕ್‌ನ ಶಾಖಾ ಕಟ್ಟಡ ನಿರ್ಮಾಣದ ವೆಚ್ಚವನ್ನು ಬ್ಯಾಂಕ್‌ನ ವತಿಯಿಂದಲೇ ಭರಿಸತಕ್ಕದ್ದು.
3) ಬ್ಯಾಂಕ ಕಟ್ಟಡಕ್ಕೆ 05 ವರ್ಷಗಳ ಅವಧಿಗೆ ಪರವಾನಗಿ ಶುಲ್ಕ ರಜೆ (License Fee Holiday) ಹಾಗೂ ತದನಂತರದ ಅವಧಿಗೆ ಮಂಗಳೂರು ವಿಶ್ವವಿದ್ಯಾನಿಲಯ ವಿಧಿಸುವ ಪರವಾನಗಿ ಶುಲ್ಕ (License Fee) ಪಾವತಿಸತಕ್ಕದ್ದು.
4) ಬ್ಯಾಂಕ್ ಇರುವಂತಹ ಸ್ಥಳವು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯದ ಸ್ವಾಧೀನ, ಸ್ವಾಮ್ಯ ಹಾಗೂ ಮಾಲಿಕತ್ವದಲ್ಲಿಯೇ ಮುಂದುವರಿಯುತ್ತದೆ.
5) ಬ್ಯಾಂಕ್ ನಿರ್ವಹಿಸಲು ನೀಡಲಾದ ಅನುಮತಿಯನ್ನು ನಿರ್ವಹಣೆದಾರರು ಯಾವುದೇ ಸಂದರ್ಭದಲ್ಲಿ ತನ್ನ ಹಕ್ಕೆಂದು ಸಾಧಿಸತಕ್ಕದಲ್ಲ.
6) ಬ್ಯಾಂಕ್ ಸ್ಥಾಪನೆ ಹಾಗೂ ನಿರ್ವಹಣೆಗಾಗಿ ಸಂಬಂಧಪಟ್ಟ ಇಲಾಖೆಗಳಿಂದ ಸೂಕ್ತ ಪರವಾನಿಗೆಯನ್ನು ಪಡೆಯತಕ್ಕದ್ದು.
7) ಬ್ಯಾಂಕ್‌ನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದಲ್ಲ.

8) ಬ್ಯಾಂಕ್ ಒಳಬಾಡಿಗೆಗೆ ಅಥವಾ ಅನ್ಯರಿಗೆ ವಹಿಸಿಕೊಡುವುದಾಗಲಿ ಮಾಡತಕ್ಕದ್ದಲ್ಲ.

9) ಬ್ಯಾಂಕ್ ನಿರ್ವಹಣೆದಾರರು ವಿಶ್ವವಿದ್ಯಾನಿಲಯದ ಆಸ್ತಿ ಪಾಸ್ತಿಗೆ ಯಾವುದೇ ಹಾನಿ ಮಾಡತಕ್ಕದ್ದಲ್ಲ.

10) ಬ್ಯಾಂಕ್ ನಿರ್ವಹಣೆದಾರರು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡತಕ್ಕದ್ದಲ್ಲ.

11) ಪರವಾನಿಗೆ ಶುಲ್ಕ ರಹಿತ ಅವಧಿಯಲ್ಲಿನ ಕಟ್ಟಡ ನಿರ್ವಹಣಾ ವೆಚ್ಚವನ್ನು ಕರ್ನಾಟಕ ಬ್ಯಾಂಕ್ ವತಿಯಿಂದಲೇ ಭರಿಸತಕ್ಕದ್ದು.

12) ಬ್ಯಾಂಕ್‌ನ ವಿದ್ಯುತ್ ಮತ್ತು ನೀರಿನ ನಿರ್ವಹಣಾ ಶುಲ್ಕವನ್ನು ಕರ್ನಾಟಕ ಬ್ಯಾಂಕ್ ಪಾವತಿಸತಕ್ಕದ್ದು.

13) ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣವನ್ನು ನೀಡದೆ ಬ್ಯಾಂಕ್ ರಚನೆಯನ್ನು ಸ್ಥಳಾಂತರಿಸಲು ಅಥವಾ ನಿರ್ವಹಿಸಲು ನೀಡಲಾದ ಅನುಮತಿಯನ್ನು ರದ್ದುಗೊಳಿಸುವಂತಹ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿದೆ.

ಮೇಲಿನ ಷರತ್ತುಗಳನ್ನೊಳಗೊಂಡು ರೂ.200/- ಠಸ್ಸೆ ಕಾಗದದಲ್ಲಿ ಒಡಂಬಡಿಕೆ ಮಾಡಿಕೊಳ್ಳುವಂತೆ ತಿಳಿಸಲಾಗಿದೆ. (ಕರಡು ಒಡಂಬಡಿಕೆ ಪ್ರತಿ ಲಗತ್ತಿಸಿದೆ.)

ತಮ್ಮ ವಿಶ್ವಾಸಿ,

ಕುಲಸಚಿವರು

ಪ್ರತಿ:

1. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ – ಕರ್ನಾಟಕ ಬ್ಯಾಂಕ್‌ನ ಶಾಖೆ ತೆರೆಯುವುದಕ್ಕೆ ನಿವೇಶನವನ್ನು ಗುರುತಿಸಿ ಸೂಕ್ತ ಕ್ರಮಕೈಗೊಳ್ಳಲು ತಿಳಿಸಲಾಗಿದೆ.
2. ಎಸ್ಟೇಟ್ ಅಧಿಕಾರಿ (ರೆವಿನ್ಯೂ), ಮಂಗಳೂರು ವಿಶ್ವವಿದ್ಯಾನಿಲಯ.
3. ಕುಲಪತಿಯವರ ಆಪ್ತಕಾರ್ಯದರ್ಶಿ, ಮಂಗಳೂರು ವಿಶ್ವವಿದ್ಯಾನಿಲಯ.

ಅನುಬಂಧ-2

# ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್ ನಿಂದ ಮಾನ್ಯತೆ ಪಡೆದಿದೆ)

ಮಂವಿ/ಡಿಇವಿ/39/2015-16/ಡಿ7

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ
ದಿನಾಂಕ 21.06.2021.

ಗೆ,

ಶಾಖಾ ವ್ಯವಸ್ಥಾಪಕರು
ಕರ್ನಾಟಕ ಬ್ಯಾಂಕ್ (ಲಿ)
ಬೆಳ್ಮ, ದೇರಳಕಟ್ಟೆ,
ಕಣಚೂರು ಅವೆನ್ಯೂ
ಮಂಗಳೂರು-575018

O/C

ಮಾನ್ಯರೇ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಬಸ್ಸು ತಂಗುದಾಣದ ಬಳಿ ಇರುವ ಕರ್ನಾಟಕ ಬ್ಯಾಂಕ್ ನ A.T.M ಕಟ್ಟಡದ ಪರವಾನಗಿ ಅವಧಿಯನ್ನು ಮುಂದುವರಿಸುವ ಬಗ್ಗೆ.

ಉಲ್ಲೇಖ: ದಿನಾಂಕ 10.06.2016ರಂದು ಸಹಿ ಮಾಡಿದ ಕರಾರು ಒಪ್ಪಂದ.

******

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಬಸ್ಸು ತಂಗುದಾಣದ ಬಳಿ ಇರುವ ಕರ್ನಾಟಕ ಬ್ಯಾಂಕ್ ನ A.T.M ಕಟ್ಟಡಕ್ಕೆ ದಿನಾಂಕ 10.06.2016ರಿಂದ 09.06.2021ರವರೆಗೆ ಪರವಾನಗಿ ಶುಲ್ಕ ರಹಿತ ಪರವಾನಗಿ ಆಧಾರದಲ್ಲಿ ನಡೆಸಲು ಅನುಮತಿ ನೀಡಿದ್ದು, ಸದರಿ ಪರವಾನಗಿ ಅವಧಿಯು ದಿನಾಂಕ 09.06.2021ರಂದು ಮುಕ್ತಾಯಗೊಳ್ಳಲಿರುವುದರಿಂದ ಸದರಿ ಕಟ್ಟಡಕ್ಕೆ ಪರವಾನಗಿ ಶುಲ್ಕ ನಿಗದಿಪಡಿಸಬೇಕಾದ ಹಿನ್ನೆಲೆಯಲ್ಲಿ ಪರವಾನಗಿ ಆಧಾರದಲ್ಲಿ ಮುಂದುವರಿಸುವ ಸಂಬಂಧ ಪ್ರಸ್ತಾವನೆಯನ್ನು ಕೂಡಲೇ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಪ್ರತಿ,

ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

ರವಾನಿಸಲಾಗಿದೆ
ನಂ 456 ದಿನಾಂಕ 23/06/21

ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್‌ನಿಂದ ಮಾನ್ಯತೆ ಹೊಂದಿದೆ)

O/C

ಸಂಖ್ಯೆ: ಮಂವಿ/ಡಿಇವಿ/39/2015–16/ಡಿ7

ಕುಲಸಚಿವರ ಕಛೇರಿ
ಮಂಗಳಗಂಗೋತ್ರಿ–57419
ದಿನಾಂಕ: 24–09–2021

# ನೆನಪೋಲೆ

**ವಿಷಯ** :ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ,ಬಸ್ಸು ತಂಗುದಾಣದ ಬಳಿ ಇರುವ ಕರ್ನಾಟಕ ಬ್ಯಾಂಕಿನ ATM ಕಟ್ಟಡದ ಪರವಾನಿಗೆ ಅವಧಿಯನ್ನು ಮುಂದುವರಿಸುವ ಬಗ್ಗೆ.

**ಉಲ್ಲೇಖ**: 1)ದಿನಾಂಕ 10-06-2021 ರಂದು ಸಹಿ ಮಾಡಿದ ಕರಾರು ಒಪ್ಪಂದ.
2)ಈ ಕಛೇರಿ ಪತ್ರ ಸಂಖ್ಯೆ ಮಂ/ಡಿಇವಿ/39/2015-16/ಡಿ 7

ಮಾನ್ಯರೇ,

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ, ಸಂಬಂಧಿಸಿದಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ , ಕರ್ನಾಟಕ ಬ್ಯಾಂಕ್ ನ ATM ಕಟ್ಟಡಕ್ಕೆ ದಿನಾಂಕ 10-06 2016 ರಿಂದ 09-06-2021 ರವರೆಗೆ ಪರವಾನಿಗೆ ಶುಲ್ಕ ರಹಿತ ಆಧಾರದಲ್ಲಿ ನಡೆಸಲು ಅನುಮತಿ ನೀಡಿದ್ದು, ಸದರಿ ಪರವಾನಿಗೆ ಅವಧಿಯು ದಿನಾಂಕ: 09-06-2021 ರಂದು ಮುಕ್ತಾಯಗೊಳ್ಳಲಿರುವುದರಿಂದ ,ಈ ಸಂಬಂಧ ಈಗಾಗಲೇ ತಮಗೆ ಪತ್ರ ವ್ಯವಹಾರ ನಡೆಸಿದ್ದು ,ತಮ್ಮಿಂದ ಯಾವುದೇ ಪ್ರತಿಕ್ರಿಯೆ ಇಲ್ಲದಿರುವುದರಿಂದ ಈ ಕುರಿತು ಪರವಾನಿಗೆ ಆಧಾರದಲ್ಲಿ ಮುಂದುವರಿಸುವ ಬಗ್ಗೆ ಈ ಕೂಡಲೇ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
M. Hemalatha
ಕುಲಸಚಿವರ ಪರವಾಗಿ

ರಿಗೆ,

ಶಾಖಾ ವ್ಯವಸ್ಥಾಪಕರು
ಕರ್ನಾಟಕ ಬ್ಯಾಂಕ್(ಲಿ)
ಬೆಳ್ಮ ,ದೇರಳಕಟ್ಟೆ
ಕಣಚೂರು ಅವೆನ್ಯು
ಮಂಗಳೂರು -575018

ರವಾನಿಸಲಾಗಿದೆ
1860 ದಿನಾಂಕ 27/9/21

ಅನುಬಂಧ-3

RPD

# ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್ ನಿಂದ ಮಾನ್ಯತೆ ಪಡೆದಿದೆ)

ಸಂಖ್ಯೆ:ಮಂವಿ/ಡಿಇವಿ/39/2015-16/ಡಿ7/ಡಿ10

MU/REG/DEV(D10)/18/2021

ಕುಲಸಚಿವರ ಕಚೇರಿ

ಮಂಗಳಗಂಗೋತ್ರಿ

ದಿನಾಂಕ:22.06.2023

ನೆನಪೋಲೆ

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಬಸ್ಸುತಂಗುದಾಣದ ಬಳಿ ಇರುವ ಕರ್ನಾಟಕ ಬ್ಯಾಂಕಿನ ATM ಕಟ್ಟಡದ ಪರವಾನಿಗೆ ಅವಧಿಯನ್ನು ಮುಂದುವರಿಸುವ ಬಗ್ಗೆ.

**ಉಲ್ಲೇಖ:** 1) ದಿನಾಂಕ 10-06-2016 ರಂದು ಸಹಿ ಮಾಡಿದ ಕರಾರು ಒಪ್ಪಂದ.

2) ಈ ಕಛೇರಿ ಪತ್ರ ಸಂಖ್ಯೆ :ಮಂ/ಡಿಇವಿ/39/2015-16/ಡಿ 7 ದಿನಾಂಕ:21.06.2021.

3) ಈ ಕಛೇರಿ ಪತ್ರ ಸಂಖ್ಯೆ :ಮಂ/ಡಿಇವಿ/39/2015-16/ಡಿ 7 ದಿನಾಂಕ:24.09.2021.

*******

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ, ಸಂಬಂಧಿಸಿದಂತೆ ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ, ಕರ್ನಾಟಕ ಬ್ಯಾಂಕ್ ನ ATM ಕಟ್ಟಡಕ್ಕೆ ದಿನಾಂಕ; 10-06-2016 ರಿಂದ 09-06-2021 ರವರೆಗೆ ಪರವಾನಿಗೆ ಶುಲ್ಕ ರಹಿತ ಆಧಾರದಲ್ಲಿ ನಡೆಸಲು ಅನುಮತಿ ನೀಡಿದ್ದು, ಸದರಿ ಪರವಾನಿಗೆ ಅವಧಿಯು ದಿನಾಂಕ: 09-06-2021 ರಂದು ಮುಕ್ತಾಯಗೊಳ್ಳಲಿರುವುದರಿಂದ,ಈ ಸಂಬಂಧ ಈಗಾಗಲೇ ತಮಗೆ ಪತ್ರ ವ್ಯವಹಾರ ನಡೆಸಿದ್ದು ,ತಮ್ಮಿಂದ ಯಾವುದೇ ಪ್ರತಿಕ್ರಿಯೆ ಇಲ್ಲದಿರುವುದರಿಂದ ಈ ಕುರಿತು ಪರವಾನಿಗೆ ಆಧಾರದಲ್ಲಿ ಮುಂದುವರಿಸುವ ಬಗ್ಗೆ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ಸದರಿ ಪತ್ರಕ್ಕೆ ಸ್ಪಂದಿಸದೇ ಇದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು.

ತಮ್ಮವಿಶ್ವಾಸಿ,

ಕುಲಸಚಿವರ ಪರವಾಗಿ

ರಿಗೆ,

ಶಾಖಾವ್ಯವಸ್ಥಾಪಕರು
ಕರ್ನಾಟಕ ಬ್ಯಾಂಕ್(ಲಿ)
ಬೆಳ್ಮ ,ದೇರಳಕಟ್ಟೆ
ಕಣಚೂರುಅವೆನ್ಯು
ಮಂಗಳೂರು -575018

BY RECD.POST /PARCEL ACK. DUE

ಪ್ರತಿ: 1. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ
2. ಕಾರ್ಯಕಾರಿ ಅಭಿಯಂತರರು, ಮಂಗಳೂರು ವಿಶ್ವವಿದ್ಯಾನಿಲಯ
3. ಜನರಲ್ ಮ್ಯಾನೇಜರ್, ಪ್ರಾದೇಶಿಕ ಕಚೇರಿ, ಕರ್ನಾಟಕ ಬ್ಯಾಂಕ್(ಲಿ), ಪಂಪ್‌ವೆಲ್, ಮಂಗಳೂರು-575002
4. ಕುಲಪತಿ/ಕುಲಸಚಿವರ ಆಪ್ತ ಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ

R.P.A

ರವಾನಿಸಲಾಗಿದೆ
ನಂ: 1275 ದಿನಾಂಕ: 3/6/23

ಅನುಬಂಧ -4

MU/REG/DEV(D10)/18/2021

593

05/7/2023
E - 16509

E - 136683

# Karnataka Bank Ltd.

Your Family Bank, Across India.

**Branch: Belma Deralakatte**
Kanachur Avenue, Opp. Yeneppoya Medical College
University Road, Deralakatte, Mangalore-575 018
Belma Village-575 018 Dist: D.K. Karnataka

Phone : 0824-2202666
E-Mail : belma.deralakatte@ktkbank.com
Website : www.karnatakabank.com
CIN : L85110KA1924PLC001128

KBL/Belma/PF /2023-24

Dt 26.06.2023

To,
The Chancellor,
Mangalore University,
Mangalagangothri.

Dear Sir,
Sub: Renewal of ATM lease agreement for the period of 10 years.
Ref: Your office letter dated 22.06.2023 received on 26.06.2023.
MV/DEV/39/2015-16/D7/D10 & MU/REG/DEV(D10)/18/2021

Referring to the subject we have approached your good office with regard to renewal of ATM lease agreement. We had submitted the documents to our panel advocate and he has sought following information's for renewal.
1.Aadhar copy of Chancellor
2.If Chancellor appears through GPA holder, Details and aadhar copy of representing officer.

Kindly provide the details at the earliest as other things for the renewal process will be kept ready.

Thanking You,

Regards,
For KARNATAKA BANK LTD.
Manager / Officer
BELMA DERALAKATTE - 575 018
Branch Manager

KARNATAKA BANK LIMITED DERALAKATTE 575 018

27/6/23

R/Dev.

28/6/23
DEV

1/7/23
D10

3/7/2023

ಅನುಬಂಧ-5

BR-1 2743/2016-17

# ದಸ್ತಾವೇಜು ಹಾಳೆ
## DOCUMENT SHEET

ಈ ಹಾಳೆಯನ್ನು ಯಾವುದೇ ದಸ್ತಾವೇಜಿಗೆ ಉಪಯೋಗಿಸಬಹುದು
This Sheet can be used for any Documents

Duplicate

## ಐದು ವರ್ಷಗಳ ಅವಧಿಯ ಗುತ್ತಿಗೆ ಕರಾರು ಪತ್ರ

ಈ ಗುತ್ತಿಗೆ ಕರಾರನ್ನು ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ, ಅದರ ಕುಲಸಚಿವರಾದ **ಪ್ರೊಫೆಸರ್ ಟಿ. ಡಿ. ಕೆಂಪರಾಜು**ರವರಿಂದ ತಾರೀಕು 09-06-2016 ರಂದು ಮಂಗಳೂರು ನೋಟರಿ ಶ್ರೀ ಪತ್ತುಮುಡಿ ಚಿದಾನಂದ ರಾವ್, ವಕೀಲರು, ಇವರ ಮುಂದೆ ನೋಟೋರಿಯಲ್ ರಿಜಿಸ್ಟರ್ ನಂಬ್ರ 283/2016 ರಂತೆ ತಯಾರಿಸಿದ ಸಾಮಾನ್ಯ ಮೊಕ್ತ್ಯಾರ್‌ನಾಮೆಯಂತೆ ನೇಮಿಸಲ್ಪಟ್ಟ ಅವರ ಮಖಾಲಿಕರಾದ **ಪ್ರೊಫೆಸರ್ ಎ. ಎಮ್. ಖಾನ್**ರವರು ಹಾಗೂ ಎ.ಟಿ.ಎಂ. ನಿರ್ವಹಿಸಲು ಅನುಮತಿ ಪಡೆದಿರುವ ಶಾಖಾ ವ್ಯವಸ್ಥಾಪಕರಾದ **ಶ್ರೀ ಸಂದೀಪ್ ಕುಮಾರ್ ಪಿ.**, ಕರ್ನಾಟಕ ಬ್ಯಾಂಕ್ ಲಿ., ಬೆಳ್ಮ ದೇರಳಕಟ್ಟೆ, ಕಣಚೂರು ಅವೆನ್ಯೂ, ದೇರಳಕಟ್ಟೆ, ಮಂಗಳೂರು, ಇವರ ನಡುವೆ ತಾರೀಕು 10-06-2016 ರಂದು ಮಾಡಿಕೊಳ್ಳಲಾಗಿದೆ.

ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿ., ಬೆಳ್ಮ ದೇರಳಕಟ್ಟೆ, ಕಣಚೂರು ಅವೆನ್ಯೂ ದೇರಳಕಟ್ಟೆ, ಮಂಗಳೂರು, ಇವರು ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬಸ್ಸು ತಂಗುದಾಣದ ಬಳಿ ಎ.ಟಿ.ಎಮ್. ನಿರ್ಮಿಸಿ, ನಿರ್ವಹಿಸಲು ಅನುಮತಿ ಕೋರಿದ್ದರು.

ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು, ಉದ್ಯೋಗಿಗಳು, ಹಾಗೂ ಸಾರ್ವಜನಿಕರ ಅನುಕೂಲ ಮತ್ತು ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಬಸ್ಸು ತಂಗುದಾಣದ ಬಳಿ, ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿ., ಬೆಳ್ಮ ದೇರಳಕಟ್ಟೆ, ಕಣಚೂರು ಅವೆನ್ಯೂ ದೇರಳಕಟ್ಟೆ, ಮಂಗಳೂರು, ಇವರಿಗೆ ಕರ್ನಾಟಕ ಬ್ಯಾಂಕ್, ಎ.ಟಿ.ಎಂ.(A.T.M.) ಕಟ್ಟಡವನ್ನು ಅವರದೇ ಸ್ವಂತ ವೆಚ್ಚದಲ್ಲಿ ನಿರ್ಮಿಸಿ ನಿರ್ವಹಿಸಲು ಈ ಕೆಳಗಿನ ಷರತ್ತುಗಳೊಂದಿಗೆ ಅನುಮತಿ ನೀಡಲಾಗಿದೆ.

1. ವಿಶ್ವವಿದ್ಯಾನಿಲಯದಿಂದ ಪಡೆದಿರುವ ಅನುಮತಿ ಈ ಕರಾರಿಗೆ ಸಹಿ ಮಾಡಿದ ದಿನಾಂಕದಿಂದ ಅನ್ವಯಿಸಿ, ಐದು ವರ್ಷಕ್ಕೇ ಸೀಮಿತವಾಗಿರತಕ್ಕದ್ದು.
2. ಎ.ಟಿ.ಎಂ. ಇರುವಂತಹ ಸ್ಥಳವು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯದ ಸ್ವಾಧೀನ, ಸ್ವಾಮ್ಯ ಹಾಗೂ ಮಾಲೀಕತ್ವದಲ್ಲಿಯೇ ಇರುತ್ತದೆ.

REGISTRAR (EVALUATION)
MANGALORE UNIVERSITY

For KARNATAKA BANK LIMITED
Manager
BELMA, DERALAKATTE - 575 018

... ... 2

ಕರ್ನಾಟಕ ಸರ್ಕಾರ

ನೋಂದಣಿ ಹಾಗೂ ಮುದ್ರಾಂಕ ಇಲಾಖೆ

Department of Stamps and Registration

## ಪ್ರಮಾಣ ಪತ್ರ

### 1957 ರ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ 10 ಎ ಅಡಿಯಲ್ಲಿಯ ಪ್ರಮಾಣ ಪತ್ರ

( ನಿಯಮ 10-A )

ಶ್ರೀ /ಶ್ರೀಮತಿ ಕರ್ನಾಟಕ ಬ್ಯಾಂಕ್ ಲಿ. ಬೆಳ್ಮ ದೇರಳಕಟ್ಟೆ ಬ್ರಾಂಚ್ ಇದರ ಬಗ್ಗೆ ಶಾಖಾ ವ್ಯವಸ್ಥಾಪಕರು, ಸಂದೀಪ್ ಕುಮಾರ್ .ಪಿ. ,
ಇವರು 500.00 ರೂಪಾಯಿಗಳನ್ನು ನಿಗದಿತ ಮುದ್ರಾಂಕ ಶುಲ್ಕವಾಗಿ ಪಾವತಿಸಿರುವದನ್ನು ದೃಡಿಕರಿಸಲಾಗಿದೆ

| ಪ್ರಕಾರ | ಮೊತ್ತ (ರೂ.) | ಹಣದ ಪಾವತಿಯ ವಿವರ |
|---|---|---|
| ಮುದ್ರಾಂಕ ಶುಲ್ಕ | 500.00 | ಡಿ.ಡಿ.ನಂ. 186980 ದಿನಾಂಕ. 13/6/2016 ದಿ ಕರ್ನಾಟಕ ಬ್ಯಾಂಕ್ ಲಿ. ಬೆಳ್ಮ ದೇರಳಕಟ್ಟೆ ಬ್ರಾಂಚ್ (ದ.ನಂ. 2743/2016-17 ದ್ವಿಪ್ರತಿ ಮುದ್ರಾಂಕ ಶುಲ್ಕ) |
| ಒಟ್ಟು : | 500.00 | |

ಸ್ಥಳ : ಮಂಗಳೂರು ತಾಲ್ಲೂಕು

ದಿನಾಂಕ : 13/06/2016

ಉಪ-ನೋಂದಣಿ ಮತ್ತು ಯುಕ್ತ ಅಧಿಕಾರಿ
ಮಂಗಳೂರು ತಾಲೂಕು

Designed and Developed by C- DAC ,ACTS Pune.

Certificate Under Section 16 Act of K.S. Act 1957

I hereby Certify that on Production of the Original Document, I have satisfied myself that the Stamp of Rs.1000/- has been paid thereon

Sub Registrar
Mangalore Taluk

Difference between the Original & Duplicate : Nil

Verified by:

3. ಎ.ಟಿ.ಎಂ. ನಿರ್ವಹಿಸಲು ನೀಡಲಾದ ಅನುಮತಿಯನ್ನು ನಿರ್ವಹಣೆದಾರರು ಯಾವುದೇ ಸಂದರ್ಭದಲ್ಲಿ ತನ್ನ ಹಕ್ಕೆಂದು ಸಾಧಿಸತಕ್ಕದ್ದಲ್ಲ.

4. ಎ.ಟಿ.ಎಂ. ಸ್ಥಾಪನೆ ಹಾಗೂ ನಿರ್ವಹಣೆಗಾಗಿ ಸಂಬಂಧ ಪಟ್ಟ ಇಲಾಖೆಗಳಿಂದ ಸೂಕ್ತ ಪರವಾನಿಗೆಯನ್ನು ಪಡೆಯತಕ್ಕದ್ದು.

5. ಎ.ಟಿ.ಎಂ.ನ್ನು ಯಾವುದೇ ಇತರ ಉದ್ದೇಶಕ್ಕಾಗಿ ಬಳಸತಕ್ಕದ್ದಲ್ಲ.

6. ಎ.ಟಿ.ಎಂ. ಒಳಬಾಡಿಗೆಗೆ ಅಥವಾ ಅನ್ಯರಿಗೆ ವಹಿಸಿಕೊಡುವುದಾಗಲೀ ಮಾಡತಕ್ಕದ್ದಲ್ಲ.

7. ಎ.ಟಿ.ಎಂ. ನಿರ್ವಹಣೆದಾರರು ವಿಶ್ವವಿದ್ಯಾನಿಲಯದ ಆಸ್ತಿ ಪಾಸ್ತಿಗೆ ಯಾವುದೇ ಹಾನಿ ಮಾಡತಕ್ಕದ್ದಲ್ಲ.

8. ಎ.ಟಿ.ಎಂ. ನಿರ್ವಹಣೆದಾರರು ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ನೀಡತಕ್ಕದ್ದಲ್ಲ.

9. ಎ.ಟಿ.ಎಂ.ಗೆ ಐದು ವರ್ಷಗಳ ಅವಧಿಗೆ ಪರವಾನಿಗೆ ಶುಲ್ಕ ರಹಿತ (Licence Fee Holiday) ಆಗಿರುತ್ತದೆ. ಹಾಗೂ ತದನಂತರದ ಅವಧಿಗೆ ಮಂಗಳೂರು ವಿಶ್ವವಿದ್ಯಾನಿಲಯ ಆ ಸಂದರ್ಭದಲ್ಲಿ ವಿಧಿಸುವ ಪರವಾನಿಗೆ ಶುಲ್ಕ (Licence Fee) ಪಾವತಿಸತಕ್ಕದ್ದು.

10. ಪರವಾನಿಗೆ ಶುಲ್ಕ ರಹಿತ ಅವಧಿಯಲ್ಲಿನ ಕಟ್ಟಡ ನಿರ್ವಹಣಾ ವೆಚ್ಚವನ್ನು ಕರ್ನಾಟಕ ಬ್ಯಾಂಕ್ ವತಿಯಿಂದಲೇ ಭರಿಸುವುದು ಹಾಗೂ ತದನಂತರದ ವೆಚ್ಚವನ್ನು ವಿಶ್ವವಿದ್ಯಾನಿಲಯವೇ ಭರಿಸತಕ್ಕದ್ದು.

11. ಎ.ಟಿ.ಎಂ. ವಿದ್ಯುತ್ ನಿರ್ವಹಣಾ ಶುಲ್ಕವನ್ನು ಕರ್ನಾಟಕ ಬ್ಯಾಂಕ್ ಪಾವತಿಸತಕ್ಕದ್ದು.

12. ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣವನ್ನು ನೀಡದೇ ಎ.ಟಿ.ಎಮ್. ರಚನೆಯನ್ನು ಸ್ಥಳಾಂತರಿಸಲು ಅಥವಾ ನಿರ್ವಹಿಸಲು ನೀಡಲಾದ ಅನುಮತಿಯನ್ನು ಆರು ತಿಂಗಳ ಅವಧಿಯ ಮುಂಚಿತವಾಗಿ ನೋಟೀಸು ನೀಡಿ ರದ್ದುಗೊಳಿಸುವಂತಹ ಅಧಿಕಾರವನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿದೆ.

ಸ್ವತ್ತಿಯ ವಿವರ:- ಆರ್.ಎಸ್.ನಂ.113, ಕೊಣಾಜೆ ಗ್ರಾಮ, ಮಂಗಳೂರು ತಾಲೂಕು, ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಬಳಿ ಮಂಗಳೂರು ವಿಶ್ವವಿದ್ಯಾನಿಲಯ: ಚಕ್ಕುಬಂದಿ: ಉತ್ತರ: ರಸ್ತೆ, ದಕ್ಷಿಣ: ರಸ್ತೆ, ಪೂರ್ವ: ರಸ್ತೆ, ಪಶ್ಚಿಮ: ಬಸ್ ನಿಲ್ದಾಣ.
ವಿಸ್ತೀರ್ಣ: 180 Sq.ft.

For KARNATAKA BANK LIMITED

ಎ.ಟಿ.ಎಮ್. ನಿರ್ವಹಣೆದಾರರು
ಸಂದೀಪ್ ಕುಮಾರ್ ಪಿ.
ಶಾಖಾ ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್ ಲಿ.
ಬೆಳ್ಮ ದೇರಳಕಟ್ಟೆ ಶಾಖೆ

ಕುಲಸಚಿವರು
ಪರವಾಗಿ ಮತಾಲಿಕರಾದ ಪ್ರೊ. ಎ. ಎಮ್. ಖಾನ್
REGISTRAR (EVALUATION)
MANGALORE UNIVERSITY

ಈ ಬಗ್ಗೆ ಸಾಕ್ಷಿಗಳು :-

1) Thirumaleshwara. K, Manager
Karnataka Bank Ltd
Kudroli Mangalore.

2) Hareesha. S. Advocate, Mangalore

ತಯಾರಿಸಿದವರು :-

ಪತ್ತುಮುಡಿ ಚಿದಾನಂದ ರಾವ್
ವಕೀಲರು ಮತ್ತು ನೋಟರಿ ಪಬ್ಲಿಕ್

'rint Date & Time : 13-06-2016 03:28:13 PM

ಸ್ತಾವೇಜು ಸಂಖ್ಯೆ : 2743

ಬ್ ರಜಿಸ್ಟ್ರಾರ ಮಂಗಳೂರು ತಾಲ್ಲೂಕು ರವರ ಕಚೇರಿಯಲ್ಲಿ ದಿನಾಂಕ 13-06-2016 ರಂದು 03:15:15 PM ಗಂಟೆಗೆ ಈ ಕೆಳಗೆ ವಿವರಿಸಿದ ಶುಲ್ಕದೊಂದಿಗೆ

| ಕ್ರಮ ಸಂಖ್ಯೆ | ವಿವರ | ರೂ. ಪೈ |
|---|---|---|
| 1 | ನೋಂದಣಿ ಶುಲ್ಕ | 200.00 |
| 2 | ಸ್ಕ್ಯಾನಿಂಗ್ ಫೀ | 320.00 |
| 3 | ದ್ವಿ ಪ್ರತಿ ಶುಲ್ಕ | 100.00 |
| 4 | ಪರಿಶೋಧನಾ ಶುಲ್ಕ | 35.00 |
| | ಒಟ್ಟು : | 655.00 |

್ರೀ ಕರ್ನಾಟಕ ಬ್ಯಾಂಕ್ ಲಿ. ಬೆಳ್ಮ ದೇರಳಕಟ್ಟೆ ಬ್ರಾಂಚ್ ಇದರ ಬಗ್ಗೆ ಶಾಖಾ ವ್ಯವಸ್ಥಾಪಕರು, ಸಂದೀಪ್ ಕುಮಾರ್ .ಪಿ. ಇವರಿಂದ ಹಾಜರ ಮಾಡಲ್ಪಟ್ಟಿದೆ

| ಹೆಸರು | ಫೋಟೊ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|
| ಶ್ರೀ ಕರ್ನಾಟಕ ಬ್ಯಾಂಕ್ ಲಿ. ಬೆಳ್ಮ ದೇರಳಕಟ್ಟೆ ಬ್ರಾಂಚ್ ಇದರ ಬಗ್ಗೆ ಶಾಖಾ ವ್ಯವಸ್ಥಾಪಕರು, ಸಂದೀಪ್ ಕುಮಾರ್ .ಪಿ. |  |  | For KARNATAKA BANK LIMI<br>Manager<br>BELMA, DERALAKATTE - 575 018 |

ಸಬ್ ರಜಿಸ್ಟ್ರಾ
ಉಪನೋಂದಣಾಧಿಕಾ
ಮಂಗಳೂರು ತಾಲೂ

ಬರೆದುಕೊಟ್ಟಿದ್ದಾಗಿ ಒಪ್ಪಿರುತ್ತಾರೆ

| ಕ್ರಮ ಸಂಖ್ಯೆ | ಹೆಸರು | ಫೋಟೊ | ಹೆಬ್ಬೆಟ್ಟಿನ ಗುರುತು | ಸಹಿ |
|---|---|---|---|---|
| 1 | ಕರ್ನಾಟಕ ಬ್ಯಾಂಕ್ ಲಿ. ಬೆಳ್ಮ ದೇರಳಕಟ್ಟೆ ಬ್ರಾಂಚ್ ಇದರ ಬಗ್ಗೆ ಶಾಖಾ ವ್ಯವಸ್ಥಾಪಕರು, ಸಂದೀಪ್ ಕುಮಾರ್ .ಪಿ.<br>(ಬರೆಸಿಕೊಂಡವರು) |  |  | For KARNATAKA BANK LIMITED<br>Manager<br>BELMA, DERALAKATTE - 575 018 |
| 2 | ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕುಲಸಚಿವರಾದ ಪ್ರೊಫೆಸರ್ ಟಿ.ಡಿ. ಕಿಂಪರಾಜು ರವರ ಏಜೆಂಟರಾಗಿ ಪ್ರೊಫೆಸರ್ ಎ.ಎಮ್. ಖಾನ್<br>(ಬರೆದುಕೊಡುವವರು) |  |  | REGISTRAR (EVALUATION)<br>MANGALORE UNIVERSITY |

ಸಬ್ ರಜಿಸ್ಟ್ರಾ
ಉಪನೋಂದಣಾಧಿಕಾ
ಮಂಗಳೂರು ತಾಲೂ

ಗುರುತಿಸುವವರು

| ಕ್ರಮ ಸಂಖ್ಯೆ | ಹೆಸರು ಮತ್ತು ವಿಳಾಸ | ಸಹಿ |
|---|---|---|
| 1 | ತಿರುಮಲೇಶ್ವರ ಕೆ. ಬಿನ್. ಮುತ್ತಪ್ಪ ದಾಸ್<br>ಮ್ಯಾನೇಜರ್, ಕರ್ನಾಟಕ ಬ್ಯಾಂಕ್ ಲಿ. ಕುದ್ರೋಳಿ ಬ್ರಾಂಚ್, ಮಂಗಳೂರು | |
| 2 | ಹರೀಶ್ .ಎಸ್.<br>ವಕೀಲರು, ಮಂಗಳೂರು | |

ಉಪನೋಂದಣಾಧಿಕಾರಿ
ಸಬ್ ರಜಿಸ್ಟ್ರಾರ್ [illegible]
ಮಂಗಳೂರು ತಾಲೂಕು

No. of Copies Registered along with Original 1 (one) Only

ಉಪನೋಂದಣಾಧಿಕಾರಿ
ಮಂಗಳೂರು ತಾಲೂಕು

1 ನೇ ಪುಸ್ತಕದ ದಸ್ತಾವೇಜು
ನಂಬರ MGT-1-02743-2016-17 ಆಗಿ
ಸಿ.ಡಿ. ನಂಬರ MGTD473 ನೇ ದ್ದರಲ್ಲಿ
ದಿನಾಂಕ 13-06-2016 ರಂದು ನೋಂದಾಯಿಸಲಾಗಿದೆ

ಕೆ. ಪಿ. ನಂಜಪ್ಪ 13/06/16
ಸಬ್ ರಜಿಸ್ಟ್ರಾರ (ಮಂಗಳೂರು ತಾಲ್ಲೂಕು)

ಉಪನೋಂದಣಾಧಿಕಾರಿ
Designed and Developed by C-DAC, ACTS, Pune ಮಂಗಳೂರು ತಾಲೂಕು

The Seal of the Sub Registrar

# ಮಂಗಳೂರು ವಿಶ್ವವಿದ್ಯಾನಿಲಯ

(ನ್ಯಾಕ್ ನಿಂದ ಮಾನ್ಯತೆ ಪಡೆದಿದೆ)

ಸಂಖ್ಯೆ:ಮಂವಿ/ಡಿಇವಿ/39/2015-16/ಡಿ7/ಡಿ10
MU/REG/DEV(D10)/18/2021

ಕುಲಸಚಿವರ ಕಚೇರಿ
ಮಂಗಳಗಂಗೋತ್ರಿ
ದಿನಾಂಕ:14.08.2023

ರಿಗೆ,
ಕಾರ್ಯಕಾರಿ ಅಭಿಯಂತರರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳ ಗಂಗೋತ್ರಿ.

ಮಾನ್ಯರೆ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕರ್ನಾಟಕ ಬ್ಯಾಂಕ್ ಎ.ಟಿ.ಎಂ ಕಟ್ಟಡದ ಪರವಾನಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ 10-06-2016 ರಂದು ಸಹಿ ಮಾಡಿದ ಕರಾರು ಒಪ್ಪಂದ.

**********

ಮೇಲಿನ ವಿಷಯಕ್ಕೆ ಸಂಬಂಧಿಸಿ ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಕರ್ನಾಟಕ ಬ್ಯಾಂಕ್ ಎ.ಟಿ.ಎಂ ಕಟ್ಟಡದ 5 ವರ್ಷಗಳ ಪರವಾನಿಗೆ ಶುಲ್ಕ ರಹಿತ (Licence Fee Holiday) ಅವಧಿಯು 09.06.2021 ಕ್ಕೆ ಮುಕ್ತಾಯಗೊಂಡಿರುತ್ತದೆ. ಉಲ್ಲೇಖದ ಕರಾರು ಪತ್ರದ ಶರ್ತ ಸಂಖ್ಯೆ (9) ರಲ್ಲಿ ತಿಳಿಸಿರುವಂತೆ ಅವಧಿ ಮುಗಿದ ನಂತರ ಮಂಗಳೂರು ವಿಶ್ವವಿದ್ಯಾನಿಲಯ ವಿಧಿಸುವ ಪರವಾನಿಗೆ ಶುಲ್ಕ (Licence Fee) ಪಾವತಿಸತಕ್ಕದ್ದು ಎಂಬುದಾಗಿದೆ. ಆದ್ದರಿಂದ ಮುಂದಿನ ಅವಧಿಗೆ ಎ.ಟಿ.ಎಂ ಕಟ್ಟಡಕ್ಕೆ ಮಾಸಿಕ ಪರವಾನಿಗೆ ಶುಲ್ಕ ನಿಗದಿಪಡಿಸಬೇಕಾಗಿರುವುದರಿಂದ ಈ ಬಗ್ಗೆ ಕಟ್ಟಡವನ್ನು ಪರಿಶೀಲಿಸಿ ಶುಲ್ಕ ನಿಗದಿಪಡಿಸುವ ಕುರಿತು ಕೂಡಲೇ ವರದಿ ನೀಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,
16/8/2023
ಕುಲಸಚಿವರು

ಪ್ರತಿ : 1. ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ.
2. ಕುಲಪತಿ/ಕುಲಸಚಿವರ ಆಪ್ತಸಹಾಯಕಿ, ಮಂಗಳೂರು ವಿಶ್ವವಿದ್ಯಾನಿಲಯ.

(8582)  E-145250.  ಅನುಬಂಧ-6

MANGALORE UNIVERSITY
ಮಂಗಳೂರು ವಿಶ್ವವಿದ್ಯಾನಿಲಯ
Registrar's Office ಕುಲಸಚಿವರ ಕಛೇರಿ
12 SEP 2023
Regn No. 8836

# ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂವಿವಿ/ಇಡಿ/ಕರ್ನಾಟಕ ಬ್ಯಾಂಕ್ /2023-24/ಎಸ್2 | 558

ಕಾರ್ಯಕಾರಿ ಅಭಿಯಂತರರ ಕಚೇರಿ
ಮಂಗಳಗಂಗೋತ್ರಿ -574199
ದಿನಾಂಕ 07.09.2023

ರಿಗೆ,

ಕುಲಸಚಿವರು
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ.

ಮಾನ್ಯರೇ,

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕರ್ನಾಟಕ ಬ್ಯಾಂಕ್ ಎ.ಟಿ.ಎಂ ಕಟ್ಟಡದ ಪರವಾನಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

ಉಲ್ಲೇಖ: 1. ತಮ್ಮ ಕಛೇರಿ ಪತ್ರ ಸಂಖ್ಯೆ: ಮಂವಿ/ಡಿಇವಿ/39/2015-16/ಡಿ7/ಡಿ10
MU/REG/DEV(D10)/18/2021 ದಿನಾಂಕ 14.08.2023
2. ಕಿರಿಯ ಅಭಿಯಂತರರ ವರದಿ

-----

DEV

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕರ್ನಾಟಕ ಬ್ಯಾಂಕ್ ಎ.ಟಿ.ಎಂ ಕಟ್ಟಡದ ಪರವಾನಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ ಉಲ್ಲೇಖ 1 ರಲ್ಲಿ ತಾವು ಕೋರಿರುವ ಮಾಹಿತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ ಎಂಬುವುದನ್ನು ಈ ಮೂಲಕ ತಮ್ಮ ಗಮನಕ್ಕೆ ತರಲಾಗಿದೆ.

D10
18/9/23

ತಮ್ಮ ವಿಶ್ವಾಸಿ

ಕಾರ್ಯಕಾರಿ ಅಭಿಯಂತರರು (ಪ್ರಭಾರ)

ಅಡಕ : 1. ಕಿರಿಯ ಅಭಿಯಂತರರ ವರದಿ
2. ತಖ್ತೆ:

18/9/023

# ವರದಿ

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕರ್ನಾಟಕ ಬ್ಯಾಂಕ್ ATM ಕಟ್ಟಡದ ಪರವಾನಿಗೆ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

-----

ಮೇಲಿನ ವಿಷಯಕ್ಕೆ ಸಂಬಂಧಿಸಿ, ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ಕರ್ನಾಟಕ ಬ್ಯಾಂಕ್ ATM ಕಟ್ಟಡದ ಅಳತೆಯು 4.65x5.55= 25.81 ಚ.ಮೀ ಇರುತ್ತದೆ. ಸದರಿ ಕಟ್ಟಡವನ್ನು 2016ರಲ್ಲಿ ನಿರ್ಮಿಸಲಾಗಿದ್ದು, 5 ವರ್ಷಗಳ ಅವಧಿ ಅಂದರೆ 2021 ಕ್ಕೆ Depreciation ಮೊತ್ತವನ್ನು ಪರಿಶೀಲಿಸಿದಾಗ ಪ್ರಸ್ತುತ ಕಟ್ಟಡದ ಮಾಸಿಕ ಬಾಡಿಗೆಯು ರೂ. 4,050.00 ಆಗಿರುತ್ತದೆ ಎಂದು ತಿಳಿಸುತ್ತಾ ಮುಂದಿನ ಕ್ರಮಕ್ಕಾಗಿ ವರದಿ ಒಪ್ಪಿಸಲಾಗಿದೆ.

ಕಾರ್ಯಕಾರಿ ಅಭಿಯಂತರರು (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
ಇಂಜಿನಿಯರ್ ವಿಭಾಗ
ಮಂಗಳಗಂಗೋತ್ರಿ - 574 199

## Karnataka Bank ATM at Mangalore University

| Sl.No | Detail | Description | Remarks |
|---|---|---|---|
| 1 | Site Value | Building Plinth Area -25.81 (4.65x5.55) Sq.m @ Rs. 5,500.00 / Sqm<br><br>Rs. 1,41,955.00 | As per Mangalore sub registrar rate (2018-19) |
| 2 | Building Value | Building Plinth<br><br>Area -25.81 Sq.m @ Rs. 22,500.00 / Sqm<br><br>Rs. 5,80,725.00 | As per Present Construction Cost |
| 3 | Depreciation Rate (Construction year 2016 -2021)<br><br>5 years) | Rs. 5,80,725.00 x 0.049<br><br>= 28,455.53 | |
| 4 | Building Present Value | Rs. 5,80,725.00 – 28,455.53 = 5,52,269.47 | |
| 5 | Total Value of the property | Rs. 1,41,955.00 + 5,52,269.47<br><br>= 6,94,224.47 | |
| 6 | Yearly rent | Rs 6,94,224.47 x 7 %<br><br>= 48,596.00 | |
| 7 | Rent per month | Rs 4,050.00 | |

ಕಾರ್ಯಕಾರಿ ಅಭಿಯಂತರರು (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
ಇಂಜಿನಿಯರ್ ವಿಭಾಗ
ಮಂಗಳಗಂಗೋತ್ರಿ - 574 199

# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 29.11.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆಯಲಿರುವ ಸಿಂಡಿಕೇಟಿನ 2023ನೇ ಸಾಲಿನ ಏಳನೇ ಸಾಮಾನ್ಯ ಸಭೆಯ ಹೆಚ್ಚುವರಿ ಕಾರ್ಯಸೂಚಿಗಳು**

| ವಿಷಯ ಸಂಖ್ಯೆ | ಕಾರ್ಯಸೂಚಿ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|---|
| | ಸಿಬ್ಬಂದಿ : ಸಾ.ಸ.7:17 (2023) | ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಿರುವ ಬಗ್ಗೆ. | **26-27** |
| | ಡಿಇವಿ : ಸಾ.ಸ.7:18 (2023) | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ, ಮಾರ್ಗಸೂಚಿಯನ್ನು ರಚಿಸುವ ಬಗ್ಗೆ. | **28** |

**ಕಾರ್ಯಸೂಚಿ ಸಂ: ಸಿಬ್ಬಂದಿ:ಸಾ.ಸ.7: 17 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಿರುವ ಬಗ್ಗೆ.

*******

ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ಪ್ರಭಾರ ನಿರ್ದೇಶಕರನ್ನಾಗಿ ನೇಮಕಾತಿ ಮಾಡಿದ್ದ ಡಾ. ಪರಮೇಶ್ವರ ಇವರು ತನಗೆ ಆರೋಗ್ಯ ಸಮಸ್ಯೆಯಿರುವುದರಿಂದ ತನ್ನನ್ನು ಸದರಿ ಜವಾಬ್ದಾರಿಯಿಂದ ಮುಕ್ತಗೊಳಿಸಬೇಕೆಂಬುದಾಗಿ ಮನವಿ ಸಲ್ಲಿಸಿರುತ್ತಾರೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 22 ರಂತೆ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನು ನೇಮಕ ಮಾಡಬೇಕಾಗಿದೆ.

ಸಂಬಂಧಿತ ಪರಿನಿಯಮ "STATUTE GOVERNING THE APPOINTMENT, TERM OF OFFICE, EMOLUMENTS, CONDITIONS OF SERVICE, POWERS AND FUNCTIONS OF THE DIRECTOR OF STUDENT WELFARE" ನ ಪಾರಾ 2 ರಲ್ಲಿ ನಿರ್ದೇಶಕರ ನೇಮಕಾತಿಯ ಅರ್ಹತೆ ಮತ್ತು ವಿಧಾನವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿರುತ್ತದೆ.

**2. APPOINTMENT, TERM OF OFFICE, EMOLUMENTS AND CONDITIONS OF SERVICE:**

2.1 The Syndicate shall recommend to the Chancellor a person from the cadre of Professor or Reader, if suitable person from these cadres is not available a person from the cadre of Lecturer who has put in not less than 10 years of service, to the Chancellor for appointment as the Director for a period of three years at a time. Such person shall work in his/her own pay and scale and shall be governed by other conditions of service as applicable to other employees of the University.

2.2 When the post of Director becomes vacant or when the Director is on leave and unable to perform his/her duties for any other reasons, such duties shall be performed by a person appointed by the Syndicate for a period not exceeding six months or until the post is filled or the Director resumes his/her duties whichever is early.

ಆದುದರಿಂದ, ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ಪ್ರಭಾರ ನಿರ್ದೇಶಕರನ್ನು ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 29(2)(ಎ) ಪ್ರಕಾರ ಸಿಂಡಿಕೇಟು ಸಭೆಯ ನಿರ್ಣಯಕ್ಕಾಗಿ ಮಂಡಿಸಲಾಗಿತ್ತು. ದಿನಾಂಕ 12.10.2023ರಂದು ನಡೆದ ಸಿಂಡಿಕೇಟು ಸಭೆಯು ಈ ಕೆಳಕಂಡ ನಿರ್ಣಯವನ್ನು ನೀಡಿರುತ್ತದೆ.

*"ಪ್ರೊ. ಬೋಜ ಪೂಜಾರಿ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯಕ್ಕೆ ನಿರ್ದೇಶಕರನ್ನಾಗಿ ನೇಮಕ ಮಾಡಲಾಯಿತು."*

ಅದರಂತೆ ಕುಲಸಚಿವರ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಮವಿ/ಕು.ಸ/ಸಿಬ್ಬಂದಿ(ಇ2)/58/2021 ದಿನಾಂಕ 25.10.2023ರಲ್ಲಿ ಡಾ. ಬೋಜ ಪೂಜಾರಿ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರನ್ನು ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರನ್ನಾಗಿ ನೇಮಕಾತಿ ಮಾಡಲಾಗಿತ್ತು. ಆದರೆ ಡಾ. ಬೋಜ ಪೂಜಾರಿ ಇವರು ತಮ್ಮ ಮನವಿ ದಿನಾಂಕ 25.10.2023ರಲ್ಲಿ ವಿಶ್ವವಿದ್ಯಾನಿಲಯವು ತನಗೆ ಈಗಾಗಲೇ ಹಲವಾರು ಜವಾಬ್ದಾರಿಗಳನ್ನು ನೀಡಿದ್ದು ವಿಭಾಗದಲ್ಲಿನ ಶೈಕ್ಷಣಿಕ ಚಟುವಟಿಕೆಗಳ ಹಿನ್ನಡೆಯಾಗುತ್ತಿರುವುದರಿಂದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶಕ ಹುದ್ದೆಯ ಜವಾಬ್ದಾರಿಯನ್ನು ಬೇರೆ ಪ್ರಾಧ್ಯಾಪಕರಿಗೆ ವಹಿಸಿಕೊಟ್ಟು ತನ್ನನ್ನು ವಿಭಾಗದ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಳ್ಳಲು ಅನುವು ಮಾಡಿಕೊಡಬೇಕೆಂದು ವಿನಂತಿಸಿರುತ್ತಾರೆ.

ಆದುದರಿಂದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದಲ್ಲಿ ಹಲವಾರು ಕೆಲಸ ಕಾರ್ಯಗಳು ತುರ್ತಾಗಿ ನಡೆಸಬೇಕಾಗಿದ್ದುದರಿಂದ ಈ ಕಚೇರಿ ಅಧಿಕೃತ ಜ್ಞಾಪನ ಸಂಖ್ಯೆ: ಮವಿ/ಕು.ಸ/ಸಿಬ್ಬಂದಿ(ಇ2)/58/2021 ದಿನಾಂಕ:24.11.2023 ರಲ್ಲಿ ಡಾ. ಗಣೇಶ್ ಸಂಜೀವ, ಮುಖ್ಯಸ್ಥರು, ಮೈಕ್ರೋಟ್ರೋನ್ ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಸಿಂಡಿಕೇಟಿನ ಅನುಮೋದನೆಯನ್ನು ಕಾಯ್ದಿರಿಸಿ ಮುಂದಿನ ಆರು ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರನ್ನಾಗಿ ನೇಮಕಾತಿ ಮಾಡಲಾಗಿದೆ.

ಆದುದರಿಂದ ಪ್ರಸ್ತಾವನೆಯನ್ನು ಸಿಂಡಿಕೇಟಿನ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

27/11/2023
12.30 P.M.

ಕಾರ್ಯಸೂಚಿ ಸಂಖ್ಯೆ: ಡಿಇವಿ: ಶಾ. ಪ್ರ. 7 : 18 (2023)

ವಿಷಯ : ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ, ಮಾರ್ಗಸೂಚಿಯನ್ನು ರಚಿಸುವ ಬಗ್ಗೆ.

**********

ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗಗಳು/ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಮತ್ತು ಘಟಕ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಪ್ರತಿ ಶೈಕ್ಷಣಿಕ ಸಾಲಿನಲ್ಲಿ ನಡೆಸಲಾಗುತ್ತಿದ್ದು, ಪ್ರಸ್ತುತ UGC ಮಾರ್ಗಸೂಚಿಯಂತೆ, ಅತಿಥಿ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ. ಎಲ್ಲಾ ವಿಷಯಗಳಿಗೆ/ಕಾರ್ಯಕ್ರಮಗಳಿಗೆ UGC ನಿಗದಿಪಡಿಸಿದ ವಿದ್ಯಾರ್ಹತೆ/ಮಾನದಂಡ ಹೊಂದಿರುವ ಅಭ್ಯರ್ಥಿಗಳು ಲಭ್ಯವಾಗದೇ ಇದ್ದ ಸಂದರ್ಭದಲ್ಲಿ ಸ್ನಾತಕೋತ್ತರ ಪದವಿ (55%) ಮತ್ತು ಬೋಧನಾನುಭವವನ್ನು ಪರಿಗಣಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ/ಸ್ನಾತಕೋತ್ತರ ಕೇಂದ್ರ ಮತ್ತು 06 ಘಟಕ ಕಾಲೇಜುಗಳಲ್ಲಿ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಮಾರ್ಗಸೂಚಿಗಳನ್ನು ರಚಿಸಲಾಗಿರುತ್ತದೆ. ಆದರೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ, ಯಾವುದೇ ಮಾರ್ಗಸೂಚಿಗಳು ಇರುವುದಿಲ್ಲ.

ಆದುದರಿಂದ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿ, ಮಾರ್ಗಸೂಚಿಯನ್ನು ರಚಿಸುವ ಪ್ರಸ್ತಾವನೆಯನ್ನು ಸಿಂಡಿಕೇಟು ಸಭೆಗೆ ಮಂಡಿಸಲಾಗಿದೆ.

27/11/2023
4.30 p.m.